IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

## ಅಧ್ಯಾಯ – 10

# ಕನ್ನಡ ಜನಪದ ಮಹಿಳಾ ವಿಚಾರ ಸಾಹಿತ್ಯ

ಜನಪದ ಸಾಹಿತ್ಯ ಪ್ರಾಚೀನವಾದುದು. ಇದು ನಾನಾ ರೂಪಗಳಲ್ಲಿ ಶಿಷ್ಟ ಸಾಹಿತ್ಯಕ್ಕೆ ಸ್ಫೂರ್ತಿ ನೀಡಿದ್ದರೂ ಅದರಿಂದ ಪುರಸ್ಕಾರ ಪಡೆಯದೆ ಮೂಲೆಗುಂಪಾಗಿ ಉಸಿರಾಡುತ್ತಾ ಉಳಿದುಕೊಂಡು ಬಂದಿದೆ. ಶಿಷ್ಟ ಸಾಹಿತ್ಯ ಕೆಲವರ ಸ್ವತ್ತಾದರೆ, ಜನಪದ ಸಾಹಿತ್ಯ ಹಲವರ ಸ್ವತ್ತಾಗಿ ಜನಪ್ರಿಯತೆ ಗಳಿಸಿ ತಲೆತಲಾಂತರಗಳಿಂದ ಪ್ರವಹಿಸಿದೆ.

ಯಾವುದೇ ಸಾಹಿತ್ಯದ ಇತಿಹಾಸದಲ್ಲಾದರೂ ಜನಪದ ಸಾಹಿತ್ಯವೇ ಪ್ರಾರಂಭದ ಸಾಹಿತ್ಯವಾಗಿರುತ್ತದೆ. ಲಿಖಿತ ಸಾಹಿತ್ಯ ವಿಕಾಸ ಹೊಂದುವ ಮುನ್ನ ಮೌಖಿಕ ಸಾಹಿತ್ಯ ಸೃಷ್ಟಿಯಾಗುವುದು ಸಹಜ ಕನ್ನಡದಲ್ಲಿ ಕವಿರಾಜಮಾರ್ಗಕಾರನು ಹೆಸರಿಸಿರುವ ಪದ್ಯ ಕವಿಗಳು ಮತ್ತು ಗದ್ಯಕವಿಗಳು ಪ್ರಬುದ್ಧ ರಚನೆಗಳನ್ನು ಸೃಷ್ಟಿಸುವ ಮೊದಲೇ 'ಓದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳಾದ' ಕನ್ನಡಿಗರು ಕಾವ್ಯ ಮಾಡಿದ್ದು ನಿಜ.

ಮಹಿಳಾಪರವಾದ ಚಿಂತನ ಕ್ರಮವನ್ನು ಪುರುಷರ ಅಧಿಕಾರದ ನೆಲೆಯಲ್ಲಿ ಮತ್ತು ಪರಿಭಾಷೆಗಳಲ್ಲಿ ವಿವರಿಸಿದಾಗ ಅದು ಅಂತಿಮವಾಗಿ ಪುರುಷನ ಪರಮಾಧಿಕಾರವನ್ನೇ ಸ್ಥಾಪಿಸಿಬಿಡುವ ಸಾಧ್ಯತೆ ಇದೆ ಇದನ್ನೇ ಕುರಿತು ಸಿಮೋನ್ ದ ಬೋವಾ ಹೇಳಿರುವ ಮಾತುಗಳು ಗಮನಾರ್ಹವಾದುವು :

"ಸಮಸ್ತ ಮನುಕುಲವೇ ಗಂಡಾಗಿ ಬಿಟ್ಟಿದೆ. ಆತ ಹೆಣ್ಣನ್ನು, ಹೆಣ್ಣಿನ ಸ್ವಾಯತ್ತತೆಯಲ್ಲಿ ವಿವರಿಸದೆ, ತನಗೆ ಸಂಬಂಧಿಸಿದಂತೆ, ತನ್ನ ದೃಷ್ಟಿಕೋನಕ್ಕೆ ಅನುಗುಣವಾಗಿ ವ್ಯಾಖ್ಯಾನಿಸುತ್ತಾನೆ. ಹೆಣ್ಣು ಸ್ವತಂತ್ರವ್ಯಕ್ತಿಯಲ್ಲ. ಆಕೆಯ ಅಸ್ತಿತ್ವ ಗಂಡಸಿನ ಅಪ್ಪಣೆಯಲ್ಲಿದೆ. ಆದ್ದರಿಂದಲೇ ಆಕೆಯನ್ನು 'ಲೈಂಗಿಕತೆ' ಎನ್ನಲಾಗಿದೆ. ಅಂದರೆ ಅವಳು ಗಂಡಿಗೆ ಕಾಮದ ಜೀವ ಮಾತ್ರ. ಅವನ ದೃಷ್ಟಿಯಲ್ಲಿ ಆಕೆ ಕಾಮದ ಮುದ್ದೆ ಆಕೆಯನ್ನೆಂದೂ ಆಕೆಗೆ ಸಂಬಂಧಿಸಿದಂತೆ ಇದುವರೆಗೆ ವ್ಯಾಖ್ಯಾನಿಸಲೇ ಇಲ್ಲ. ಆಕೆ ಬಹುಮಟ್ಟಿಗೆ ಕೇವಲ ಒಂದು ಆಕಸ್ಮಿಕ". (ಉಧೃತ : ಮನುಚಕ್ರವರ್ತಿ; 1993:3) ಇಂಥ ಸನ್ನಿವೇಶದಲ್ಲಿ ನಮಗೆ ಲಭ್ಯವಿರುವ ಭಾಷೆಯ ಮೂಲಕ ಮಹಿಳಾ ಜಾನಪದವನ್ನು ವಿವರಿಸುವುದು ತುಂಬ ಶ್ರಮ ಸಾಧ್ಯವಾದ ವಿಚಾರವಾಗಿದೆ. ಇದಕ್ಕಾಗಿ ಹೊಸ ವಿಧಾನ ಮತ್ತು ಪರಿಭಾಷೆಗಳನ್ನು ನಾವು ರೂಪಿಸಿಕೊಳ್ಳಬೇಕಾಗಿದೆ.[1]

ಈಗ ಸ್ತ್ರೀ ಪರ ಯಾವುದು ಮತ್ತು ಪುರುಷ ಪರ ಯಾವುದು ಎಂಬುದನ್ನು ಖಚಿತವಾಗಿ ವಿವರಿಸಿ ಹೇಳಲು ಸಾಧ್ಯವಾಗದ ಸ್ಥಿತಿಯೊಂದು ನಮ್ಮ ಮುಂದಿದೆ. ಗಂಡಸರು ಹೆಂಗಸರ ನಡುವೆ ಸುಲಭವಾಗಿ ಪ್ರವೇಶಿಸಲು ಸಾಧ್ಯವಾಗುವಂತೆ ಮತ್ತು ಹೆಂಗುಸರನ್ನು ಸದಾ ತಮ್ಮ ಅಧೀನದಲ್ಲಿಟ್ಟುಕೊಳ್ಳುವಂತೆ ಗಂಡಸರು ನಿರ್ಮಿಸಿಕೊಂಡ ವ್ಯವಸ್ಥೆಯ ಬಗ್ಗೆ ಅವರು ನಮ್ಮ ಗಮನ ಸೆಳೆದಿದ್ದಾರೆ. ಹೀಗಾಗಿ ನಾವು 'ಸಹಜ' ಎಂದುಕೊಂಡಿರುವುದು ಮೂಲತಃ 'ಅಸಹಜ' ಆಗಿರಬಹುದಾದ ಸಾಧ್ಯತೆ ಇದೆ. 'ಇದು ಮಹಿಳೆಯ

ಸ್ವಭಾವ' ಎಂದು ಹೇಳುತ್ತಿರುವುದು ಗಂಡಸಿನ ಧ್ವನಿ ಆಗಿರಬಹುದು. ತುಂಬಾ ಸೂಕ್ಷ್ಮವಾದ ಸಂಗತಿಗಳಲ್ಲಿ ನಿಖರತೆಯನ್ನು ಸಾಧಿಸುವುದು ತುಂಬಾ ಕಷ್ಟದ ಕೆಲಸ.

ಅದೇ ರೀತಿ ಮಹಿಳೆಯರ ಸ್ಥಾನಮಾನದಲ್ಲಿ ಕಂಡು ಬರುತ್ತಿರುವ ವೈವಿಧ್ಯಗಳನ್ನೆಲ್ಲ ಏಕಸೂತ್ರವೊಂದರಲ್ಲಿ ವಿವರಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಅದು ಚಾರಿತ್ರಿಕವಾಗಿ ಒಂದು ಬಗೆಯಲ್ಲಿದ್ದರೆ. ಸಮಕಾಲೀನವಾಗಿ ಇನ್ನೊಂದು ರೀತಿಯಲ್ಲಿದೆ. ಚರಿತ್ರೆಯ ಭಿನ್ನ ಭಿನ್ನ ಘಟ್ಟಗಳಲ್ಲಿ ಮಹಿಳೆಯು ವಿಭಿನ್ನ ರೀತಿಯಲ್ಲಿ ತನ್ನನ್ನು ತೋರ್ಪಡಿಸಿಕೊಂಡಿರುವ ಉಲ್ಲೇಖಗಳು ಹಲವು ಬಗೆಯ ಗೊಂದಲಗಳನ್ನು ಹುಟ್ಟು ಹಾಕುತ್ತಿವೆ. 12ನೇ ಶತಮಾನದ ವಚನ ಚಳುವಳಿಯಲ್ಲಿ ಕಾಣಿಸಿಕೊಂಡ ಅಕ್ಕ ಮಹಾದೇವಿ, ಸೂಳೆ ಸಂಕವ್ವರನ್ನು ಮತ್ತು ಮೈಸೂರರಸರ ಕೈಕೆಳಗೆ ದುಡಿದ 'ಸಂಚಿಯ ಹೊನ್ನಮ್ಮ' ನನ್ನು ಮಹಿಳೆ ಎಂಬ ಕಾರಣಕ್ಕೆ ಒಂದೇ ಚೌಕಟ್ಟಿನಲ್ಲಿರಿಸಿ ಚರ್ಚಿಸಲು ಸಾಧ್ಯವಿಲ್ಲ. ಆತ್ಮದ ನೆಲೆಯಲ್ಲಿ ಸ್ತ್ರೀ–ಪುರುಷ ವ್ಯತ್ಯಾಸವನ್ನು ಅವರು ಮೀರಬಲ್ಲವರಾಗಿದ್ದರು. ಸಮಕಾಲೀನ ಭಾರತೀಯ ಸಮಾಜವನ್ನು ವಿಸ್ತಾರವಾಗಿ ಅವಲೋಕಿಸಿದರೆ ಅಲ್ಲಿಯೂ ಬೇರೆ ಬೇರೆಯಾಗಿರುವ ಮಹಿಳಾ ಸ್ಥಾನ ಮಾನಗಳ ಮಾಹಿತಿಗಳು ದೊರೆಯುತ್ತಿವೆ. ಆದ್ದರಿಂದ ಇವೆಲ್ಲವನ್ನು ಒಂದೇ ಚೌಕಟ್ಟಿಗೆ ತಂದು ಚರ್ಚಿಸುವುದು ಸಾಧ್ಯವಿಲ್ಲವಾಗಿದೆ.

ಮಹಿಳಾ ಸಮಸ್ಯೆಗಳನ್ನು ಪ್ರಾದೇಶಿಕ ಅರಿವಿನಲ್ಲಿ ಚರ್ಚಿಸಬೇಕಾಗಿದೆ. ಎಂದು ಅನಿಸುತ್ತದೆ. ರಾಜಕೀಯವಾದ ಗಡಿ ರೇಖೆಗಳನ್ನು ಆಧರಿಸಿ ಚರ್ಚಿಸಬಾರದು, ಆಧುನಿಕ ರಾಷ್ಟ್ರಗಳ ಹಿಂದಿನ ರಾಜಕೀಯವು ಮಹಿಳಾ ಸಮಸ್ಯೆಯನ್ನು ರಾಷ್ಟ್ರೀಯಗೊಳಿಸಿ, ಸರಳಗೊಳಿಸುವ ವಿಧಾನವನ್ನು ಅನುಸರಿಸುತ್ತಿವೆ ಇವುಗಳ ಬಗ್ಗೆ ಎಚ್ಚರಿಕೆ ವಹಿಸುವುದು ಮುಖ್ಯ.

'ಕನ್ನಡ ಜನಪದ ಸಾಹಿತ್ಯದಲ್ಲಿ ಮಹಿಳಾ ವೈಚಾರಿಕತೆ' ಮನು ಕುರಿತಾದ ಚರ್ಚೆಯಲ್ಲಿ ಈ ಮೇಲೆ ಹೇಳಿದ ಸಮಸ್ಯೆಗಳು ಕಂಡುಬರುತ್ತದೆ. ಜಗತ್ತನ್ನು ಇದುವರೆಗೆ 'ಗಂಡು' ಎಂಬ ಒಂದು ಕಣ್ಣಿನಿಂದ ನೋಡಿ, ನೋಡಿದ್ದನ್ನೇ ಸರ್ವಸ್ವ ಎಂದು ಭ್ರಮಿಸಿ, ಅದನ್ನೇ ಅಧಿಕೃತವೆಂದು ವಿವರಿಸುತ್ತ ಬಂದಿರುವುದು ಕಾಣುತ್ತೇವೆ. 'ಹೆಣ್ಣು' ಎಂಬ ಇನ್ನೊಂದು ಕಣ್ಣನ್ನು ಮುಚ್ಚಿಕೊಂಡಿದ್ದರಿಂದ ನಮಗೆ ಇದುವರೆಗೆ ಅಂಶಿಕ ಸತ್ಯಗಳು ಮಾತ್ರ ಗೋಚರಿಸಿವೆ. ಈಗ ಹೆಣ್ಣೆಂಬ ಇನ್ನೊಂದು ಕಣ್ಣನ್ನು ತೆರೆಯುವುದು ಅಗತ್ಯವಾಗಿದೆ. ಹಾಗೆಂದರೆ, ಗಂಡೆಂಬ ಕಣ್ಣನ್ನು ಮುಚ್ಚುವುದೆಂದು ಯಾರೂ ಭಾವಿಸಬೇಕಾಗಿಲ್ಲ. ಬದಲು ಎರಡೂ ಕಣ್ಣುಗಳ ನೋಟದ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುವುದು ಮುಖ್ಯವಾಗಿದೆ.

'ಕನ್ನಡ ಜನಪದ ಸಾಹಿತ್ಯದಲ್ಲಿ ಮಹಿಳಾ ವೈಚಾರಿಕತೆ' ಅಧ್ಯಯನಕ್ಕೆ ಕನ್ನಡ ಜಾನಪದದ ನಾಲ್ಕು ಮುಖ್ಯ ಪ್ರಕಾರಗಳಲ್ಲಿಯ ಮಾಹಿತಿಗಳನ್ನು 'ಸ್ತ್ರೀಪರ' ದೃಷ್ಟಿಕೋನದಿಂದ ವಿಶ್ಲೇಷಿಸಿಕೊಳ್ಳುವುದು ಅಗತ್ಯ.

1. ಜಾನಪದದ ಮೌಖಿಕ ಸಾಹಿತ್ಯ (ಜನಪದ ಮಹಾಕಾವ್ಯಗಳು, ಕತೆಗಳು, ತ್ರಿಪದಿಗಳು, ಹಾಡುಗಳು, ಖಂಡಕಾವ್ಯಗಳು, ಗಾದೆ, ಒಗಟು, ಮತ್ತಿತರ ರೂಪಗಳು) ಪ್ರಕಾರವನ್ನು ಗಮನಿಸಬೇಕು.
2. ಜಾನಪದದ ಭೌತಿಕ ರೂಪದಲ್ಲಿ ಮಹಿಳೆಯ ಸ್ಥಾನಮಾನಗಳನ್ನು (ಮನೆಯಲ್ಲಿ ಮಹಿಳೆಯ ಪಾತ್ರ, ಉಡುಗೆ, ತೊಡುಗೆಗಳ ಸಾಂಕೇತಿಕ ಅರ್ಥ, ಸಂಸ್ಕೃತಿ, ಜನಪದ ವೈದ್ಯ ಪದ್ಧತಿ, ಸೂಲಗಿತ್ತಿ) ಗಮನಿಸಿ ಅವಳ ಒಟ್ಟಾರೆ ಬದುಕಿನ ಮೇಲೆ ಯಾವ ಪರಿಣಾಮ ಬೀರಿದೆ ಎಂಬುದನ್ನು ಅಭ್ಯಸಿಸಬೇಕಾಗಿದೆ.
3. ಸಾಮಾಜಿಕ ಸಂಪ್ರದಾಯಗಳು :

   ಇದರಲ್ಲಿ ವಿಭಾಗ ಮಾಡಿಕೊಳ್ಳಬಹುದು ಮೊದಲನೆಯದು ಜೀವನಾವರ್ತನದ ಆಚರಣೆಗಳು, (ಹುಟ್ಟು, ಮುಟ್ಟು, ಮದುವೆ, ಸೀಮಂತ ಮತ್ತು ಸಾವು) ಇಲ್ಲೆಲ್ಲ ಮಹಿಳೆಯ ಜವಾಬ್ದಾರಿಗಳನ್ನು ತಿಳಿದುಕೊಳ್ಳುವುದು. ಎರಡನೆಯದು –

ವಾರ್ಷಿಕಾವರ್ತನದ ಆಚರಣೆಗಳು ( ವಿವಿಧ ರೀತಿಯ ಹಬ್ಬ ಜಾತ್ರೆಗಳು) ಇವುಗಳಲ್ಲಿ ಮಹಿಳೆಯರೆ ಪ್ರಧಾನ ಕೆಲಸ ನಿರ್ವಹಿಸುತ್ತಾರೆ. ಇದಕ್ಕೆ ಕಾರಣಗಳನ್ನು ಶೋಧಿಕೊಳ್ಳಬೇಕಾಗಿದೆ.

4. ಪ್ರದರ್ಶನ ಕಲೆಗಳು :

ಕರ್ನಾಟಕದ ಎಲ್ಲೆಡೆ ಪ್ರಚಾರದಲ್ಲಿರುವ ತೆಂಕುತಿಟ್ಟು, ಬಡಗುತಿಟ್ಟು ಯಕ್ಷಗಾನಗಳಲ್ಲಿ, ದೊಡ್ಡಾಟಗಳಲ್ಲಿ, ಶ್ರೀಕೃಷ್ಣಪಾರಿಜಾತದಲ್ಲಿ, ಮೂಡಲಪಾಯದಲ್ಲಿ, ಘಟ್ಟದ ಕೊರೆಯಲ್ಲಿ, ಕೇಳಿಕೆಗಳಲ್ಲಿ ಮಹಿಳೆಯರೇ ಮಾಡುವ ಪಾತ್ರಗಳ ಬಗೆ, ಗಂಡಸರು ಹೆಂಗಸರ ವೇಷ ಹಾಕಿಕೊಳ್ಳುವುದರ ಕಾರಣ, ಪ್ರದರ್ಶನಗಳಲ್ಲಿ ಮಹಿಳೆಯನ್ನು ಕಟ್ಟಲಾದ ರೀತಿ ಇತ್ಯಾದಿಗಳನ್ನು ವಿಶ್ಲೇಷಿಸಿಕೊಳ್ಳಬೇಕಾಗಿದೆ. ಅಂಟಿಕೆ–ಪಂಟಿಕೆ, ಆಟಿಕಳೆಂಜ, ಒನಕೆ ಕುಣಿತ, ನಾಗಮಂಡಲ, ಹೋಳಿ ಮತ್ತಿತರ ಜನಪದ ಕಲೆಗಳು, ಜನಪದ ಕ್ರೀಡೆಗಳಾದ ಕುಂಟುಬಿಲ್ಲೆ, ಚೆನ್ನೆಮಣೆ, ಹುಲಿ–ದನಗಳಲ್ಲಿ ಕೂಡ ಮಹಿಳೆಯನ್ನು ಕಂಡರಿಸಿದ ಬಗೆಯನ್ನು ಅಭ್ಯಾಸಕ್ಕೆ ಒಳಪಡಿಸಬೇಕಾಗಿದೆ.

ಜನಪದ ಗೀತೆ :

ಜನಪದ ಗೀತೆಗಳು, ಬಹುತೇಕ ತ್ರಿಪದಿಗಳು. ಹೆಣ್ಣಿನ ನೂರಾರು ಅನುಭವಗಳ ಅಭಿವ್ಯಕ್ತಿಯನ್ನು ಇವು ತಿಳಿಸುತ್ತವೆ. ಆಕೆಗೆ ಎದುರಾದ ಇಕ್ಕಟ್ಟು, ಸಂಘರ್ಷಕ್ಕೆ, ಸಂಕಟಕ್ಕೆ ನೀಡಿದ ಪ್ರತಿಕ್ರಿಯೆಯಾಗಿದೆ.

ಮಾತೃರೂಪಿ ಕುಟುಂಬದಲ್ಲಿ ಗಂಡುಮಕ್ಕಳು ಎಷ್ಟಿದ್ದರೂ ಕುಟುಂಬಕ್ಕೆ, ಮನೆತನಕ್ಕೆ ಫಲವಿಲ್ಲ, ಶೋಭೆಯಿಲ್ಲ. ಹೆಣ್ಣುಮಗಳು 'ಕುಲದೀಪವಾಗಿ ಬೆಳುಗುವವಳು, ಕುಟುಂಬಕ್ಕೆ ಕಲಶಪ್ರಾಯವಾಗುವಳು.

"ಗಂಡು ಸಂತಾನ ಒಂಭತ್ತು ಕೊಡಿ ಸ್ವಾಮಿ
ಒಂಭತ್ತೇಳಿಗೂ ಕಳಸವು ಕೈ ಮುಗುವಲ್
ರಂಬಿ ಒಬ್ಬಳನು ಕೊಡಿ ಸ್ವಾಮಿ"[2]

ಇಲ್ಲಿ ಹೆಣ್ಣಿನ ಹುಟ್ಟು ಅಮಂಗಲದ, ಬೇಡವಾದ ಸಂಗತಿಯಲ್ಲ. ಹೆಣ್ಣಿನ ಹುಟ್ಟು ಬಗೆಬಗೆಯ ಹರಕೆಯ ಬಗೆಯ ನಿರೀಕ್ಷೆಯದು. ಸಂಪಿಗೆ ಹೂ ದೇವರಿಗೆ ಪ್ರೀಯವಾದ ಹೂ, ಹಾಗೆಯೇ ತಾಯಿಯು ಹೆಣ್ಣು ಮಗುವಿಗಾಗಿ ಈ ದುಬಾರಿ ಹೂವಿನ ಹರಕೆ ಹೊರುತ್ತಾಳೆ.

"ಒಂಭತ್ತೇಳಿಗೂ ಕಳಸವೆಂಬಂತೆ
ಸಂತೋಸಕೊಬ್ಬ್ ಮಗ್ಳ್ ಹುಟ್ರೆ ದೇವ್ರಿಗೆ
ಸಂಪಿಗೆ ತೇರ್ನ ಎಳ್ಸೂವಿ"[3]

ಹೀಗೆ ಕುಟುಂಬದ ಪ್ರೀತಿ, ಗೌರವ ಪಡೆದ ಹೆಣ್ಣು ಅತ್ಮವಿಶ್ವಾಸ ತುಂಬಿಕೊಂಡೇ ಬೆಳೆಯುತ್ತಾಳೆ. ಮದುವೆಯಾದರೆ ಹೆಣ್ಣು ಕುಲಕ್ಕೆ ಹೊರಗಲ್ಲ, 'ಪತಿಯೇ ಪರದೈವ' ಎನ್ನುವ ದೃಷ್ಟಿ ಇಲ್ಲಿನದಲ್ಲ. 'ಗಂಡನ ದೂರು ತವರಲ್ಲಿ ಆಡಿದರೆ ಹೆಣ್ಣೇ ನಿನ್ ಬಾಳು ಹಾಳಕ್ಕು' ಎಂಬ ಕನ್ಯೋಪದೇಶಕ್ಕೆ ಬದಲಾಗಿ.

"ಅಂದ ಗಂಡನ ಮಾತು ಬಂದ್ವೇಳು ನನಗೆ
ಆಡ್ಡಾತ ಬಂದ್ವೇಳು ನಿನ್ನ ತವರೀಗೆ"[4]

ಎಂಬ ಬೆಂಬಲ ತವರಿನಿಂದ ಇರುತ್ತದೆ. ಮನೆಯ ಹೆಂಡತಿ ಬಿಟ್ಟು ಇನ್ನೊಂದು ಹೆಣ್ಣನ್ನು ಬಯಸಿದರೆ ಹೆಂಡತಿಯಾದವಳು ವಿಚ್ಛೇದನ ಹೇಳಲು ಹಿಂಜರಿಯಳು. ಹೆಣ್ಣುತನವನ್ನು ಒಪ್ಪಿಕೊಳ್ಳುವುದು ಈ ಬಗೆಯ ಆತ್ಮ ವಿಶ್ವಾಸದ ಆಕೃತಿಗಳಲ್ಲಿ ಹೊರತು ಅವಮಾನದ ಅಸಹಾಯಕತೆಯ ಮೂರ್ತಿಯಲ್ಲಲ್ಲ.

ಕಥನಕವನ :

'ಕೆರೆಗೆ ಹಾರ' ಹೆಣ್ಣೊಬ್ಬಳು ಹೊಸ ಕೆರೆಗೆ ಹಾರವಾದ ಕಥೆಯನ್ನು ಹೇಳುತ್ತದೆ. ಇಲ್ಲಿ ಪ್ರಕೃತಿಯ (ಹೆಣ್ಣು) ನಾಶದ ಮೇಲೆ ಸಂಸ್ಕೃತಿಯ (ಪುರುಷ) ಕಟ್ಟೋಣ ನಡೆದಿದೆ. ಗಂಡಿನಿಂದ ಮತ್ತು ಗಂಡಿಗಾಗಿ ರಚಿತವಾದ ಈ ಕಟ್ಟುವಿಕೆಯಲ್ಲಿ ಹೆಣ್ಣಿನ ಬದುಕು ಮತ್ತು ಸಾವನ್ನು ಗಂಡಿನ ಶ್ರೇಯಸ್ಸಿಗಾಗಿ ಬಳಸಿಕೊಂಡದ್ದು ಕಂಡು ಬರುತ್ತದೆ. ಇದೊಂದು ಬಲಿಯೇ ಹೊರತು ಆತ್ಮಬಲಿ, ಬಲಿದಾನವಲ್ಲ ಎಂದು ಹೇಳಬಹುದು. ಇದು ಪುರುಷರೂಪಿ ಸಮಾಜದಲ್ಲಿ ಹೆಣ್ಣು ಜೀವಕ್ಕಿರುವ ಅರ್ಥ ಮತ್ತು ಮೌಲ್ಯವನ್ನು ತಿಳಿಸುತ್ತದೆ. ಹೆಣ್ಣಿನ ನರಬಲಿ ಸಮಷ್ಠಿ ಹಿತದ ನೆಪದಲ್ಲಿ ಪುರುಷಾಶಾಹಿ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ಉದ್ದೇಶದ್ದಾಗಿದೆ.

ಜನಪದ ಮಹಾಕಾವ್ಯಗಳು :

ಹೆಣ್ಣನ್ನು ಹೀನಾಯವಾಗಿ ಕಾಣುವ ಭಾಗಗಳು ಯಥೇಚ್ಛವಾಗಿ ಸಿಗುವುದು ಜನಪದ ಮಹಾಕಾವ್ಯಗಳಲ್ಲಿ ಅತ್ಯಂತ ಪ್ರಮುಖವಾದ 'ಮಲೆಯ ಮಾದೇಶ್ವರ' ಕಾವ್ಯದಲ್ಲಿ ಗಂಡಸಿನ ಎಲ್ಲ ಬಗೆಯ ಅಹಂಕಾರಗಳನ್ನು ಎತ್ತಿ ಹಿಡಿಯುವ, ಸ್ತ್ರೀ ವಿರೋಧಿ ಭಾವಗಳನ್ನು ವ್ಯಕ್ತಿಪಡಿಸಿರುವ ಸಂಕಮ್ಮನ ಸಾಲುಗಳಂತೂ ಗಮನಾರ್ಹವಾಗಿವೆ. ಸೋಲಿಗ ನೀಲಪ್ಪನಿಗೆ ಸಂಕಮ್ಮಳು ಗುಡಿಸಲಲ್ಲಿ ಒಬ್ಬಳೇ ಇರುವ ಬಗ್ಗೆ ಸಂಶಯ ಬಂದು ಆತ ಗುಡಿಸಲ ಮುಂದೆ ಎಪ್ಪತ್ತೇಳು ಮಂಡಲ ಬರೆಯುತ್ತಾನೆ. ಕಾಕಾಸಿ ಗೊಂಬೆ ಮಾಡಿ ಬಾಗಿಲಲ್ಲಿ ಕಾವಲಿರಿಸುತ್ತಾನೆ. ಆಕೆಯ ಬಟ್ಟೆಯನ್ನು ಬಿಚ್ಚಿಸಿ ಸೊಪ್ಪಿನ ಉಡುಗೆ ಮಾಡಿಸುತ್ತಾನೆ. ಬಾಯಿಗೆ ಸೂಜಿ ಕೊಡುತ್ತಾನೆ. ಕಣ್ಣಿಗೆ ಕಾವಾಡ ಕಟ್ಟಿ, ಹಿಂಗೈ ಮುಂಗೈ ಕಟ್ಟುತ್ತಾನೆ. ಇದೆಲ್ಲವನ್ನೂ ನೀಲೇಗೌಡ ವಜ್ರದ ಮಲೆಯ ಕಾಡಿಗೆ ಬೇಟೆಗೆ ಹೋಗುವಾಗ ಮಾಡಿರುತ್ತಾನೆ. ಇದಷ್ಟೇ ಅಲ್ಲದೇ ಬೇಟೆಯಿಂದ ಮರಳಿದ ಬಳಿಕ ಸಂಕಮ್ಮನ ಪಾತಿವ್ರತ್ಯವನ್ನು ಮತ್ತೆ ಪರೀಕ್ಷಿಸುವ ಭಾಗವಂತೂ ಆಶ್ಚರ್ಯಕರವಾಗಿದೆ. ಇಕ್ಕೇರಿ ದೇವಮ್ಮನ ಸಾಲು, ಬೇಬಿನ ಕಾಳಿಯ ಸಾಲುಗಳಲ್ಲಿಯೂ ಮಹಿಳೆಯರನ್ನು ಅವಮಾನಿಸಿದ ಘಟನೆಗಳು ಕಂಡುಬರುತ್ತವೆ.

'ಮಂಟೇಸ್ವಾಮಿ ಮಹಾಕಾವ್ಯ'ವು ಕಾಳಮ್ಮನನ್ನು ಸೋಲಿಸಿ ತನ್ನ ಪವಾಡವನ್ನು ಮರೆದುದು ಮತ್ತು ಸುಕ್ಕಾಲಿಗರ ಮಾರಿಯ ಚೆನ್ನ ಚರ್ಮ ಸುಲಿದು ಬಾಸುಂಡೆ ಮೂಡಿಸಿದ್ದು ಕಂಡುಬರುತ್ತದೆ 'ಜುಂಜಪ್ಪನ ಕಾವ್ಯ'ದಲ್ಲಿ ಮಕ್ಕಳಾಗದ ಚೆನ್ನಮ್ಮ 'ಹೊಟ್ಟ್ಯಾಗ ಮಕ್ಕಳಿಲ್ಲದವಳು, ಕಟ್ಟೇಗ ನೀರಿಲ್ಲದವಳು' ಎಂಬ ಮಾತುಗಳಿಂದ ಹಂಗಿಸಲ್ಪಟ್ಟಿದ್ದಾಳೆ. ಎಲ್ಲಮ್ಮನ ಕತೆಯಲ್ಲಿ ರೇಣುಕೆ ನೀರನ್ನು ತರಲು ಹೋಗಿ ಹೊಳೆಯಲ್ಲಿ ಗಂಧರ್ವರನ್ನು ನೋಡಿದ ಪಾಪಕ್ಕೆ ಆಕೆ 'ತೊನ್ನು ರೋಗ'ಕ್ಕೆ ಬಲಿಯಾಗುತ್ತಾಳೆ ಹೀಗೆ ಜನಪದ ಮಹಾಕಾವ್ಯಗಳಲ್ಲಿ ಹೆಣ್ಣನ್ನು ಲಘುವಾಗಿ ಕಾಣಲಾಗಿದೆ.

ಜನಪದ ಕಥೆಗಳು :

ಅನೇಕ ಕಥೆಗಳಲ್ಲಿ ಹೆಣ್ಣನ್ನು ತುಚ್ಛವಾಗಿ ಕಂಡಿದ್ದಾರೆ. ಕತೆಗಳಲ್ಲಿ ಕಥಾನಾಯಕನಿಗೆ 'ಕಾಟ ಕೊಡುವವರು ರಾಕ್ಷಸಿಯರಿರುತ್ತಾರೆ. ಸೂಳೆಯರನ್ನು ಕತೆಗಳಲ್ಲಿ ಕಲ್ಪಿಸಲಾಗಿದೆ. 'ಹೆಂಗಸರಲ್ಲಿ ಹೇಳಿದ ಗುಟ್ಟು ನಿಲ್ಲುವುದಿಲ್ಲ' ಎಂಬ ನಂಬುಗೆಯನ್ನು ಗಟ್ಟಿಗೊಳಿಸುವಂಥ ಕಥೆಗಳು ಹೇರಳವಾಗಿವೆ. ಹೀಗೆ ಕಥೆಗಳು ಮಹಿಳಾ ವಿರೋಧಿ ಧೋರಣೆಗಳನ್ನುಳ್ಳವಾಗಿವೆ.

ಚಿಕ್ಕ ಮಕ್ಕಳು ಆಟ ಆಡುವಾಗ ಪುಟಾಣಿ ಪದಗಳಲ್ಲಿಯೂ ಪುರುಷ ಪಕ್ಷಪಾತತನ ಕಾಣುತ್ತದೆ. ಉದಾಹರಣೆಗೆ ಶಿಶುಪ್ರಾಸ ಗಮನಿಸಬಹುದು.

ಅವ್ವ ಅವ್ವ ದೊಸೆ ಹುಯ್ಯ

ಅಪ್ಪ ಅಪ್ಪ ಮೀಸೆ ಹುಯ್ಯ

ಗಾದೆಗಳು ಕೂಡಾ ಮಹಿಳೆಯನ್ನು ಕನಿಷ್ಠವೆಂದೇ ಭಾವಿಸುತ್ತವೆ. ಕೆಲವು ಗಾದೆಗಳನ್ನು ಇಲ್ಲಿ ಗಮನಿಸಬಹುದು.

* 'ಹೆತ್ತವಳ ಮುಖ ಚಂದ ಹೆರದವಳ ಮೊಲೆ ಚೆಂದ'
* ಹೆಣ್ಣಿನ ಬುದ್ಧಿ ಮೊಣಕಾಲ ಕೆಳಗೆ
* ಹೆಣ್ಣು ನಗಬಾರದು, ಗಂಡು ಅಳಬಾರದು
* ಹೆಣ್ಮಕ್ಕಳ ಬಾಯಿ ಸುಮ್ಮನೆ ಕೂರ.

ಹೆಣ್ಣಿನ ಬಗೆಗೆ ಪ್ರಚಲಿತದಲ್ಲಿರುವ ಕೆಲವು ನಂಬಿಕೆಗಳೂ ಸಹ ಹೆಣ್ಣನ್ನು ಅತ್ಯಂತ ಕೀಳಾಗಿ ಪರಿಗಣಿಸುತ್ತವೆ.

* ಕುದುರೆ ಕಾಲಿನ ಹೆಣ್ಣು ಕುಲಕ್ಕೆ ಕೇಡು.
* ಮುಟ್ಟಾದವರು ಮಕ್ಕಳನ್ನು ಹಾಗೂ ಸಸ್ಯಗಳನ್ನು ಮುಟ್ಟಿದರೆ ಅವು ನಾಶ ಹೊಂದುತ್ತವೆ. (ಬಾಡುತ್ತವೆ.)
* ಹೆಂಗಸರ ಸೀರೆ ಗಂಡಸರಿಗೆ ತಾಗಿದರೆ ಗಂಡನ ಆಯಸ್ಸು ಕಡಿಮೆ.

ಹೀಗೆ ಜನಪದ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಮಹಿಳೆಯನ್ನು ಶೋಷಣೆಗೆ ಒಳಪಡಿಸುವಂಥ ವಿವರಗಳು ಕಂಡುಬರುತ್ತವೆ.

ಭೌತಿಕ ಜಾನಪದದ ಕೆಲವು ಭಾಗಗಳನ್ನು ಗಮನಿಸಿದರೆ, ಸ್ತ್ರೀ ಶೋಷಣೆಯ ಕಠೋರ ಸತ್ಯಗಳು ಕಣ್ಣಿಗೆ ಬೀಳುತ್ತವೆ. ಉದಾಹರಣೆಗೆ 'ಮನೆಯ ರಚನೆ' ಗಮನಿಸಬಹುದು. ಅಡುಗೆ ಕೋಣೆ ಕತ್ತಲಮಯವಾಗಿರಬೇಕು, ಬೆಳಕು ಬರುವ ಕಿಟಕಿಗಳಿರುವಂತಿಲ್ಲ. ಹೊಗೆ ಹೋಗಲು ಕೊಳವೆಗಳೂ ಇರುವುದಿಲ್ಲ. ಅಡುಗೆ ಕೋಣೆಯಲ್ಲಿ ಧಾನ್ಯಗಳೆಲ್ಲ ಬೆಚ್ಚಗಿರುವಂತೆ ಸದಾ ಬೆಂಕಿಯಿಂದ ಬೆಚ್ಚಗಾಗಿರುವ, ಗಾಳಿ ಸಂಚಾರವೇ ಇಲ್ಲದ ಅಡುಗೆ ಮನೆಯಲ್ಲಿ ಹೆಂಗಸರು ತಮ್ಮ ಬಾಲ್ಯ, ಮಧ್ಯ, ಮುಪ್ಪನ್ನು ಕಳೆಯುತ್ತಾರೆ. ಹೀಗಾಗಿ ಹೆಂಗಸರು ಅನೇಕ ರೋಗಗಳಿಗೆ ತುತ್ತಾಗಿ ಜೈವಿಕ ಹಿಂಸೆಯನ್ನು ಎದುರಿಸಬೇಕಾಗುತ್ತದೆ.

ಸಾಮಾಜಿಕ ಆಚರಣೆಗಳಲ್ಲಿ ನೋಡಬೇಕಾದರೆ ನಮಗೆಲ್ಲ ಗೊತ್ತಿರುವಂತೆ ನಮ್ಮ ದೇಹದ ಬಲಕ್ಕೆ ಪ್ರಾಶಸ್ತ್ಯ ಹೆಚ್ಚು, ಎಡ ಕನಿಷ್ಠ ಎಂದು ಭಾವಿಸುವುದು. ಹೆಣ್ಣನ್ನು ದೇಹದ ಕೆಳಭಾಗದೊಂದಿಗೆ ಮತ್ತು ಹಿಂಭಾಗಕ್ಕೆ ಸಮಿಕರಿಸಿದ್ದನ್ನು ಕಾಣುತ್ತೇವೆ. ಇದು ಇಂದಿಗೂ ಮತ್ತಷ್ಟೂ ಗಟ್ಟಿಗೊಳ್ಳುತ್ತಾ ಹೋಗುತ್ತಿದೆ.

ಜನಪದ ಆಟಗಳಲ್ಲಿ ಮಹಿಳಾ ಶೋಷಣೆಯನ್ನು ಅಧಿಕೃತಗೊಳಿಸಿದ್ದಾರೆ. ಹೆಣ್ಣುಮಕ್ಕಳ ನಡುವೆ ಜನಪ್ರಿಯವಾಗಿರುವ 'ಕುಂಟಾಬಿಲ್ಲೆ' ಆಟವಂತೂ ಹೆಣ್ಣು ಮನೆಯೊಳಕ್ಕೆ ಅಂಟಿಕೊಂಡು ಬಿದ್ದಿರಬೇಕಾದ ಅಗತ್ಯವನ್ನು ಪ್ರತಿಪಾದಿಸುತ್ತದೆ. ಇಂಥ ಆಟಗಳು, ಮುಂದೆ ಆಕೆ ತನ್ನ ಗಂಡನೊಡನೆ ಹೇಗೆ ಬಾಳಬೇಕೆಂಬ ಕುರಿತು ವಿವರ ನೀಡುವಂತೆ ರಚಿತವಾಗಿದೆ ಎಂದು ಹೇಳಬಹುದು.

ಕರಾವಳಿಯ ಯಕ್ಷಗಾನ, ದೊಡ್ಡಾಟ, ಮೂಡಲಪಾಯ, ಡಪ್ಪಿನಾಟಕಗಳಲ್ಲಿ ಹೆಣ್ಣು ಯಾವತ್ತೂ ತನ್ನ ಗಂಡಿನಾಸರೆಯನ್ನು ಬಯಸುವ, ಆತನ ಪಾದ ಸೇವೆಗಾಗಿ ಮಾತ್ರ ಹಾರೈಸುವುದು ಕಂಡುಬರುತ್ತದೆ. ಪಾತಿವ್ರತ್ಯ ರಕ್ಷಣೆ ಮಾಡುವ ಪ್ರಸಂಗಗಳಂತೂ ತುಂಬಾ ಜನಪ್ರಿಯವಾಗಿವೆ. ಇವೆಲ್ಲವುಗಳ ಜೊತೆಗೆ ಸತಿ, ವೈಧವ್ಯ, ವರದಕ್ಷಿಣೆ, ಅತ್ಯಾಚಾರಗಳಂಥ ಘೋರ ವಿಷಯಗಳು ಎಲ್ಲಾ ಸೇರಿಕೊಂಡು ಹೆಣ್ಣಿನ ಸ್ಥಿತಿ ಚಿಂತಾಜನಕವಾಗಿದೆ. ಒಗಟುಗಳಲ್ಲಿ ಶ್ರೇಷ್ಠ–ಕನಿಷ್ಠಗಳ ಪರಿಕಲ್ಪನೆಯ ನೆಲೆಯಲ್ಲಿ ಹೆಣ್ಣು ಗಂಡುಗಳನ್ನು ಸಮೀಕರಿಸಿದ್ದಾರೆ. ಹೆಣ್ಣಿನ ಲೈಂಗಿಕತೆಯನ್ನು ಅನೈತಿಕ, ಅಶ್ಲೀಲದ ವ್ಯಂಗ್ಯ ಪರಿಭಾಷೆಯಲ್ಲಿ ನಿಗ್ರಹಿಸುತ್ತಾರೆ.

'ತಾಯಿ ಮಗಳ ಕಾರುಬಾರಿನಲ್ಲಿ ಮನೆಗೆ ಬಂದವರೆಲ್ಲ ಬಜ್ಜಿ (ಕಡೆಯುವ ಕಲ್ಲು)', ಬಿಳಿ ಹೆಣ್ಣಿಗೆ ಗುದ್ದಿದರೆ ನೂರು ಮಕ್ಕಳನ್ನು ಹೆರುತ್ತಾಳೆ. (ಬೆಳ್ಳುಳ್ಳಿ), ಒಂದು ಹೆಣ್ಣಿಗೆ ಮೂರು ತೂತು (ಬೀಸುವ ಕಲ್ಲು) ಇವೆಲ್ಲ ಗಂಡಸಿಗೆ ಯಾಕೆ ಇಲ್ಲ ಎಂಬ ಪ್ರಶ್ನೆ ಕಾಡುತ್ತಿದೆ.

"ಸಾಮಾಜಿಕ ನಿಯಮಾವಳಿಗಳನ್ನು ಕಾಯ್ದುಕೊಳ್ಳುವಲ್ಲಿ ಸಂವಹನವನ್ನು ಮನದಟ್ಟಾಗಿಸಿ ನಿರಂತರಗೊಳಿಸುವಲ್ಲಿ ಗಾದೆ ಒಗಟುಗಳು ವಿಶೇಷವಾಗಿ ದುಡಿಯುತ್ತವೆ. ಲಿಂಗ ಪಾವಿತ್ರ್ಯದ ನಿರಚನೆಯ ಸಾಧ್ಯತೆಯಾಗಿ ಗಾದೆ ಒಗಟುಗಳ ರಚನೆ ಮತ್ತು ಬಳಕೆ ಆಗಬೇಕಿದೆ. ಮಾತೃರೂಪಿ ಕರಾವಳೀ ಸಂಸ್ಕೃತಿಯಲ್ಲಿನ 'ಒಂದು ಹೆಣ್ಣು ಹೆಣ್ಣಲ್ಲ, ಒಂದು ಕಣ್ಣು ಕಣ್ಣಲ್ಲ' ಎನ್ನುವಂತಹ ಗಾದೆಗಳು ಹುಟ್ಟಿದಾಗ ಲಿಂಗ ಪ್ರಭೇದದ ನಿರಚನೆಯಾಗುತ್ತದೆ."[5]

**ಸಮಾರೋಪ :**

ಕನ್ನಡ ಜಾನಪದದಲ್ಲಿ ಸ್ತ್ರೀ ವಿರೋಧಿ, ಸ್ತ್ರೀ ಶೋಷಣೆ, ಲಿಂಗ–ಅಸಮಾನತೆಗಳನ್ನು ಜಾಗೃತಿಯಾಗಿ ಅಭ್ಯಸಿಸುವುದರ ಮೂಲಕ ಮಹಿಳಾ ವಿಮೋಚನೆಗೆ ಬೇಕಾದ ಬಲಿಷ್ಠ ಚರಿತ್ರೆಯೊಂದನ್ನು ನಿರ್ಮಿಸಿಕೊಳ್ಳಲು ಸಾಧ್ಯವಿದೆ. ಕನ್ನಡದಲ್ಲಿ ದೊರೆಯುವ ನೂರಾರು ಐತಿಹ್ಯಗಳಲ್ಲಿ ಸ್ತ್ರೀಯರೇ ಹೆಚ್ಚು ಶಕ್ತಿವಂತರಾಗಿರುವ ಅಂಶ ಎದ್ದು ಕಾಣುತ್ತದೆ. ಬುಡಕಟ್ಟು ಮತ್ತು ಜಾತಿ ಸಮಾಜಗಳಲ್ಲಿ 'ಸೂಲಗಿತ್ತಿ'ಯೂ ಪ್ರಸ್ತಾಪಿಸಿರುತ್ತದೆ ಹೀಗೆ ಜಾನಪದ ಸಾಹಿತ್ಯದಲ್ಲಿ 'ಸ್ತ್ರೀಪರ ಚಿಂತನೆಗಳೂ ಇವೆ.

ಇಂದಿನ ಜಾಗತೀಕರಣ, ಖಾಸಗೀಕರಣ ಮತ್ತಿತರ ಬೆಳವಣಿಗೆಗಳು ಸ್ತ್ರೀ ಶೋಷಣೆಯನ್ನು ಹೆಚ್ಚು ಮಾಡುತ್ತಿವೆ. ಆಕೆಯ ಶಕ್ತಿ ಕೇಂದ್ರಗಳನ್ನು ಛಿದ್ರಗೊಳಿಸುತ್ತಿವೆ. ಇಂತಹ ಸಂದಿಗ್ಧದಲ್ಲಿ ಜಾನಪದ ಮಾಹಿತಿಗಳ ಮೂಲಕ ಮಹಿಳಾ ವಿಮೋಚನೆಗೆ ಬೇಕಾದ ತಂತ್ರಗಳನ್ನು ರೂಪಿಸಿಕೊಳ್ಳಬೇಕಾದದ್ದು ಅಗತ್ಯವಾಗಿದೆ.

**ಅಡಿಟಿಪ್ಪಣಿಗಳು**

1. ಕನ್ನಡ ಸಾಹಿತ್ಯ ಮತ್ತು ಮಹಿಳೆ– ಸಂ ಡಾ. ಸಬಿಹಾ ಭೂಮಿಗೌಡ, ಡಾ.ಮಲ್ಲಿಕಾ ಘಂಟಿ, ಪು.ಸಂ.117–118
2. ಮಹಿಳಾ ಸಂಕಥನ – ಡಾ ॥ ಗಾಯತ್ರಿ ನಾವಡ, ಪು.ಸಂ.85
3. ಅದೇ
4. ಅದೇ
5. ಮಹಿಳಾ ಸಂಕಥನ – ಡಾ॥ ಗಾಯತ್ರಿ ನಾವಡ, ಪು.ಸಂ.110